OS. 102.2018 **DW-2**

ಸಾಕ್ಷಿದಾರರನ್ನು ಕರೆಯಿಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು

ದಿನಾಂಕಃ 04-03-2024.

<u>ಪಾಟೀ ಸವಾಲುಃ-</u> ಶ್ರೀ. ಎಸ್ ಜಿ ವಾದಿ ಪರ ವಕೀಲರಿಂದ

ನಾನು ಪಿಯುಸಿ ವರೆಗೆ ವ್ಯಾಸಂಗಮಾಡಿದ್ದೇನೆ . ನನ್ನ ಗಂಡನ ಹೆಸರು ಸುರೇಶ , ಯಶವಂತ ನನ್ನ ಮಗ , ನನ್ನ ಮಾವನ ಹೆಸರು ಬೆಟ್ಟಯ್ಯ ಉಃ ಪುಟ್ಟಯ್ಯ ಅವರಿಗೆ ಒಬ್ಬನೇ ಗಂಡುಮಗ . ಹೆಣ್ಣುಮಕ್ಕಳು ಯಾರು ಇಲ್ಲ. ಇದಕ್ಕೆ ಸಂಬಂಧಪಟ್ಟಂತೆ ವಂಶವೃಕ್ಷವನ್ನು ಹಾಜರುಪಡಿಸಲು ತೊಂದರೆ ಇಲ್ಲ.

4 ನೇ ಪ್ರತಿವಾದಿ ರಂಗಸ್ವಾಮಿ ಗೊತ್ತು , ಅವರು ನಮ್ಮ ಮಾವನ ಸಂಬಂಧೀಕರು. ನನ್ನ ಮಾವನ ತಂದೆಯ ಹೆಸರು ಕುಂಟಬೋರಯ್ಯ . ಕುಂಟಬೋರಯ್ಯರವರಿಗೆ ಒಬ್ಬರೇ ಹೆಂಡತಿ, ದೊಡ್ಡಮ್ಮ ಉಃ ಚನ್ನಮ್ಮ. ಕುಂಟಬೋರಯ್ಯರವರಿಗೆ ಎರಡು ಜನ ಹೆಂಡತಿಯರು , 1 ನೇ ಚನ್ನಮ್ಮ ಹಾಗೂ 2 ನೇ ನಂಜಮ್ಮ ಎಂದರೆ ಸಾಕ್ಷಿಯು ಇಲ್ಲಾ ಒಬ್ಬರೇ ಹೆಂಡತಿ ಎಂದು ಹೇಳಿದರು. ಕುಂಟಬೋರಯ್ಯರವರು ಮೊದಲನೇ ಹೆಂಡತಿ ಚನ್ನಮ್ಮ ರವರ ಮಗ ನಿಮ್ಮ ಮಾವ ಬೆಟ್ಟಯ್ಯ ಉಃ ಪುಟ್ಟಯ್ಯ ಎಂದರೆ ಸಾಕ್ಷಿಯು ಕುಂಟಬೋರಯ್ಯರವರಿಗೆ ಒಬ್ಬಳೇ ಹೆಂಡತಿ ಚನ್ನಮ್ಮ, ಅವರ ಮಗ ನನ್ನ ಮಾವ ಬೆಟ್ಟಯ್ಯ ಉಃ ಪುಟ್ಟಯ್ಯ ಎಂದು ಹೇಳಿದರು. ಕುಂಟಬೋರಯ್ಯರವರ 2 ನೇ ಹೆಂಡತಿ ನಂಜಮ್ಮರವರಿಗೆ ವಾದಿಯರಾದ ಮಂಜಮ್ಮ ಮತ್ತು ತಾಯಮ್ಮ ಇಬ್ಬರು ಹೆಣ್ಣುಮಕ್ಕಳು ಎಂದರೆ ಸರಿಯಲ್ಲ. ನನ್ನ ಮಾವ ಬೆಟ್ಟಯ್ಯ ಉಃ ಪುಟ್ಟಯ್ಯರವರಿಗೆ ಇಬ್ಬರು ಮಕ್ಕಳು ಒಂದು ಹೆಣ್ಣು ಮತ್ತು ಒಂದು ಗಂಡು ಅದರಲ್ಲಿ ನನ್ನ ಗಂಡ ಸುರೇಶ ಒಬ್ಬ ಮಗನಾಗಿದ್ದು, 3 ನೇ ಪ್ರತಿವಾದಿ ಪಂಕಜಾ ರವರು ಹೆಣ್ಣುಮಗಳಾಗಿರುತ್ತಾಳೆ ಎಂದರೆ

ಸಾಕ್ಷಿಯು ಒಬ್ಬರೇ ಮಗ ಅದು ನನ್ನ ಗಂಡ ಸುರೇಶ ಎಂದು ಹೇಳಿದರು. 3 ನೇ ಪ್ರತಿವಾದಿ ಪಂಕಜಾ ನನ್ನ ಗಂಡನ ಜೊತೆ ಹುಟ್ಟಿರುವುದಿಲ್ಲ.

ಕುಂಟಬೋರಯ್ಯ ಯಾವಾಗ ಮರಣಹೊಂದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಮಾವ ಬೆಟ್ಟಯ್ಯ ರವರು 2006 ರಲ್ಲಿ ಮರಣಹೊಂದಿರುತ್ತಾರೆ . ನನ್ನ ಗಂಡ ಸುರೇಶ ರವರು 2018 ರಲ್ಲಿ ಮರಣಹೊಂದಿರುತ್ತಾರೆ .

ದಾವಾ ಆಸ್ತಿಗಳನ್ನು ನನ್ನ ಮಾವ ಬೆಟ್ಟಯ್ಯರವರು ಸ್ವಂತವಾಗಿ ಖರೀದಿ ಮಾಡಿದ್ದರು. ನನ್ನ ಮಾವನ ಸ್ವಯಾರ್ಜಿತ ಆಸ್ತಿ ಎಂದು ತೋರಿಸಲು ದಾಖಲಾತಿಯನ್ನು ಹಾಜರುಪಡಿಸಿರುತ್ತೇನೆ . ನನ್ನ ಮಾವ ಪೌತಿಯಾದ ನಂತರ ನನ್ನ ಮಾವನ ಹೆಸರಿನಲ್ಲಿದ್ದ ಸ್ವತ್ತಿನ ಎಲ್ಲಾ ದಾಖಲಾತಿಗಳು ನನ್ನ ಗಂಡನ ಹೆಸರಿಗೆ ವರ್ಗಾವಣೆಯಾಯಿತು . ವರ್ಗಾವಣೆಯಾದ ನಂತರ ನನ್ನ ಗಂಡನ ಮರಣದ ನಂತರ ಆಸ್ತಿಯ ದಾಖಲಾತಿಗಳನ್ನು ನನ್ನ ಹೆಸರಿಗೆ ವರ್ಗಾವಣೆ ಮಾಡಿಸಿಕೊಂಡಿರುತ್ತೇನೆ .

ನಿಪಿ-1 ರಲ್ಲಿ ತೋರಿಸಿರುವ ಸಣ್ಣಮ್ಮ ಬಿನ್ ಪುಟ್ಟಯ್ಯ ಎಂದರೆ ನನ್ನ ಅತ್ತೆ . ನಿಪಿ-7 ರಲ್ಲಿ ತೋರಿಸಿರುವ ಸಣ್ಣಮ್ಮ ಬಿನ್ ಪುಟ್ಟಯ್ಯ ಉಃ ಬೆಟ್ಟಯ್ಯ ಬಿನ್ ಬೋರಯ್ಯ ಉಃ ಜೋಗಯ್ಯ ಎಂದು ತೋರಿಸಿದ್ದು , ಬೆಟ್ಟಯ್ಯ ಬಿನ್ ಬೋರಯ್ಯ ಇವರು ನಮ್ಮ ಸಂಬಂಧೀಕರು. ನಿಪಿ-8 ರಲ್ಲಿ ತೋರಿಸಿರುವ ಪುಟ್ಟಯ್ಯ ಬಿನ್ ಕುಂಟಬೋರಯ್ಯ ನನ್ನ ಮಾವ , ಬೆಟ್ಟಯ್ಯ ಬಿನ್ ಜೋಗಯ್ಯ ಅವರು ನನ್ನ ಮಾವನ ಅಣ್ಣತಮ್ಮಂದಿರು. ಸಣ್ಣಮ್ಮ ಕೋಂ ಪುಟ್ಟಯ್ಯ ನನ್ನ ಅತ್ತೆ ಮತ್ತು ಮಾವ .

ಮಂಜಮ್ಮ ಮತ್ತು ತಾಯಮ್ಮ ರವರು ದಾವಾ ಆಸ್ತಿಯಲ್ಲಿ ಭಾಗ ಬರಬೇಕೆಂದು ದಾವಾ ಸಲ್ಲಿಸಿದ್ದಾರೆ . ಮಂಜಮ್ಮ ಮತ್ತು ತಾಯಮ್ಮ ರವರಿಗೆ ಆಸ್ತಿಯಲ್ಲಿ ಯಾವುದೇ ಹಕ್ಕು ಇರುವುದಿಲ್ಲ. ಕುಂಟಬೋರಯ್ಯನ 2 ನೇ ಹೆಂಡತಿ ನಂಜಮ್ಮ ರವರ ಮಕ್ಕಳು ಈ ವಾದಿಯರು ಎಂದರೆ ಸಾಕ್ಷಿ ಅವರು

ಯಾರು ಎಂದು ಗೊತ್ತಿರುವುದಿಲ್ಲ. ವಾದಿಯರ ಮೇಲೆ, ನಮ್ಮ ವಿರುದ್ಧ ಆಸ್ತಿಗಾಗಿ ಅನಾಮಧೇಯ ವ್ಯಕ್ತಿಗಳು ದಾವಾ ಸಲ್ಲಿಸಿದ್ದಾರೆ ಎಂದು ದೂರು ನೀಡಲು ತೊಂದರೆ ಇರುವುದಿಲ್ಲ . ಕುಂಟಬೋರಯ್ಯರವರ ಮರಣದ ನಂತರ ದಾವಾ ಸ್ವತ್ತಿನ ದಾಖಲಾತಿಗಳು ಅವರ ಮಗ ಬೆಟ್ಟಯ್ಯ ಉಃ ಪುಟ್ಟಯ್ಯ ನನ್ನ ಖಾಸಾ ಮಾವನ ಹೆಸರಿಗೆ ವರ್ಗಾಣೆಯಾಗಿರುತ್ತದೆ ಎಂದರೆ ಸಾಕ್ಷಿಯು ನನ್ನ ಮಾವನ ಸ್ವಯಾರ್ಜಿತ ಸ್ವತ್ತು ಅವರೇ ಸ್ವಂತವಾಗಿರುತ್ತದೆ ಎಂದು ಹೇಳಿದರು. ನನ್ನ ಮಾವನ ಮರಣದ ನಂತರ ರೆವಿನ್ಯೂ ಅಧಿಕಾರಿಗಳೊಂದಿಗೆ ಷರೀಖಾಗಿ ನನ್ನ ಗಂಡ ದಾಖಲಾತಿಗಳನ್ನು ಅವರ ಹೆಸರಿಗೆ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಗಂಡ ಪೌತಿಯಾದ ನಂತರ ಕೆಲವು ಸ್ವತ್ತಿನ ದಾಖಲಾತಿಗಳನ್ನು ರೆವಿನ್ಯೂ ಅಧಿಕಾರಿಗಳೊಂದಿಗೆ ಷರೀಖಾಗಿ ನನ್ನ ಹೆಸರಿಗೆ ವರ್ಗಾವಣೆಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆ ರೀತಿ ದಾಖಲಾತಿಯನ್ನು ವರ್ಗಾವಣೆಮಾಡಿಸಿಕೊಂಡು ನನ್ನ ಹೆಸರಿಗೆ ಖಾತೆ ಸೃಷ್ಟಿಸಿಕೊಂಡಿರುತ್ತೇನೆಂದರೆ ಸರಿಯಲ್ಲ.

ನಾನು ಸಲ್ಲಿಸಿರುವ ಲಿಖಿತ ಹೇಳಿಕೆಯಲ್ಲಿ ಮಾಹಿತಿಯನ್ನು ನಾನೇ ನೀಡಿರುತ್ತೇನೆ .

ಮುಂದುವರೆದ ಪಾಟೀ ಸವಾಲಿಗಾಗಿ ಸಮಯವಕಾಶ ಕೋರಿದ್ದು ನೀಡಲಾಯಿತು.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.,

ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಚನ್ನರಾಯಪಟ್ಟಣ